ಹೆಸರುಗಳನ್ನು ರಾಜ್ಯದಲ್ಲಿ ವ್ಯಾಪಕ ಪ್ರಸಾರವುಳ್ಳ ಮೂರು ವಾರ್ತಾ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು.

ರಾಜ್ಯದ ಯೋಜನೆಗೆ ನಿಗದಿಯಾದ ವೆಚ್ಚ.

518 (488): ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್)

ಮಾನ್ಯ ರಾಜ್ಯ ಯೋಜನಾ ಮತ್ತು ಸಾಂಸ್ಥಿಕ ಹಣಕಾಸು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1992–93ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯದಲ್ಲಿನ ಅಭಿವೃದ್ಧಿ ಕೆಲಸಗಳಿಗಾಗಿ ವಿವಿಧ ಯೋಜನೆಗಳಿಗೆ ನಿಗದಿ ಮಾಡಿದ ವೆಚ್ಚ ಎಷ್ಟು ?

ಆ. ಹೀಗೆ ನಿಗದಿ ಮಾಡಿದ ವೆಚ್ಚದ ಹಣವನ್ನು ಉಪಯೋಗಿಸಿಕೊಳ್ಳುವಲ್ಲಿ ರಾಜ್ಯ ಸರ್ಕಾರವು ವಿಫಲವಾಗಿರುವುದು ನಿಜವೇ ?

ಇ. ಹಾಗಿದ್ದಲ್ಲಿ ಈ ವಿಫಲತೆಗೆ ಕಾರಣವೇನು ಹಾಗೂ ಮುಂದಿನ ವರ್ಷಗಳಲ್ಲಿ ಇದನ್ನು ನಿವಾರಿಸಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಟಿ. ಎಂ. ಮಂಜುನಾಥ್ (ರಾಜ್ಯ ಯೋಜನಾ ಮತ್ತು ಸಾಂಸ್ಥಿಕ ಹಣಕಾಸು ಮಂತ್ರಿಗಳು):–

ಅ. 1992–93ನೇ ಸಾಲಿಗೆ ಕೇಂದ್ರ ಪುರಸ್ಕೃತ ಕಾರ್ಯಗಳು ಮತ್ತು ಕೇಂದ್ರ ಯೋಜನಾ ಕಾರ್ಯಗಳಿಗೆ ಕೇಂದ್ರದ ಪಾಲು ಒಟ್ಟು ರೂ. 46628 ಲಕ್ಷ (ಆಯವ್ಯಯ ಅಂದಾಜು)

ಆ. ಇಲ್ಲ.

ಇ. ಉದ್ಭವಿಸುವುದಿಲ್ಲ.

ರಾಜ್ಯ ಉಚ್ಚನ್ಯಾಯಾಲಯದ ನ್ಯಾಯಾಧೀಶರ ಹುದ್ದೆಗಳ ಭರ್ತಿ.

519 (928): ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದ ಉಚ್ಚನ್ಯಾಯಾಲಯದಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ?

ಆ. ಉಚ್ಚನ್ಯಾಯಾಲಯದ ಮುಂದೆ ಇತ್ಯರ್ಥವಾಗದೆ ಉಳಿದಿರುವ ವಿವಾದಗಳ ಸಂಖ್ಯೆ ಎಷ್ಟು ?

ಇ. ಖಾಲಿ ಇರುವ ನ್ಯಾಯಾಧೀಶರ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):–

ಅ. 6 (ಆರು ನ್ಯಾಯಾಧೀಶರ ಹುದ್ದೆಗಳು ಖಾಲಿ ಇವೆ)

1. ಖಾಯಂ ನ್ಯಾಯಾಧೀಶರ ಹುದ್ದೆ – 4
2. ಹೆಚ್ಚುವರಿ ನ್ಯಾಯಾಧೀಶರ ಹುದ್ದೆ – 2

ಆ. ದಿನಾಂಕ: 30–11–1992ರಲ್ಲಿ ಒಟ್ಟು 1,12,874 (1,10,368) ಸಿವಿಲ್ ಪ್ರಕರಣಗಳು ಮತ್ತು 2,506 ಕ್ರಿಮಿನಲ್ ಪ್ರಕರಣಗಳು ಬಾಕಿ ಇದ್ದವು.